ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 24-10-1971.

*ದೃಷ್ಟಿಯಿಂದ ಪರಿವರ್ತಿಸುವ ವಿಧಿ* (नज़र से निहाल करने की विधि)

ತಮ್ಮ ಸ್ವರೂಪ, ಸ್ವದೇಶ, ಸ್ವಧರ್ಮ, ಶ್ರೇಷ್ಠಕರ್ಮ, ಶ್ರೇಷ್ಠ ಸ್ಥಿತಿಯಲ್ಲಿರುತ್ತಾ ನಡೆಯುತ್ತೀರಾ? ಏಕೆಂದರೆ ವರ್ತಮಾನ ಸಮಯದಲ್ಲಿ ಈ ಸ್ವಸ್ಥಿತಿಯ ಸ್ಥಿತಿಯಿಂದಲೇ ಸರ್ವಪರಿಸ್ಥಿತಿಗಳನ್ನು ಪಾರು ಮಾಡುವಿರಿ ಅರ್ಥಾತ್ ಪಾಸ್-ವಿತ್-ಆನರ್ ಆಗಬಲ್ಲಿರಿ. ಕೇವಲ ಒಂದು 'ಸ್ವ' ಶಬ್ದವು ನೆನಪಿದ್ದರೂ ಸಹ ಸ್ವ-ಸ್ವರೂಪ, ಸ್ವಧರ್ಮ, ಸ್ವದೇಶ ತಾನಾಗಿಯೇ ನೆನಪಿರುವುದು ಅಂದಮೇಲೆ ಒಂದು 'ಸ್ವ' ಶಬ್ದವೂ ನೆನಪಿರುವುದಿಲ್ಲವೇ? ಸ್ವ-ಸ್ವರೂಪ ಮತ್ತು ಸ್ವಧರ್ಮದಲ್ಲಿ ಸ್ಥಿತ ಮಾಡುತ್ತಾ ಸ್ವದೇಶಿಗಳನ್ನಾಗಿ ಮಾಡುವುದು ಅವಶ್ಯಕತೆಯಿದೆ. ಅಂದಮೇಲೆ ತಾವು ಯಾವ ಕರ್ತವ್ಯಕ್ಕಾಗಿ ನಿಮಿತ್ತರಾಗಿದ್ದೀರಿ ಅಥವಾ ಅವತರಿತರಾಗಿದ್ದೀರಿ, ಅಂದಮೇಲೆ ಯಾವುದೇ ಕರ್ತವ್ಯವನ್ನು ಹಾಗೂ ತಮ್ಮನ್ನು ತಾವು ತಿಳಿದುಕೊಳ್ಳುತ್ತಾ, ಒಪ್ಪಿಕೊಳ್ಳುತ್ತಾ ಮರೆಯಲು ಸಾಧ್ಯವೇ? ಇಂದು ಯಾವುದೇ ಲೌಕಿಕ ಕರ್ತವ್ಯ ಮಾಡುತ್ತಾ ಯಾರಾದರೂ ತಮ್ಮ ಕರ್ತವ್ಯವನ್ನು ಮರೆಯುವರೇ? ಡಾಕ್ಟರ್ ತನ್ನ ಡಾಕ್ಟರ್ ಕರ್ತವ್ಯವನ್ನು ನಡೆಯುತ್ತಾ-ತಿರುಗಾಡುತ್ತಾ, ತಿನ್ನುತ್ತಾ ಕುಡಿಯುತ್ತಾ, ಅನೇಕ ಕರ್ತವ್ಯಗಳನ್ನು ಮಾಡುತ್ತಾ ನನ್ನದು ಡಾಕ್ಟರ್ ಕರ್ತವ್ಯ ಎಂಬುದು ಮರೆಯುತ್ತದೆಯೇ? ನೀವು ಬ್ರಾಹ್ಮಣರು ನಿಮ್ಮ ಜನ್ಮ ಹಾಗೂ ಕರ್ಮ ಇದೇ ಆಗಿದೆ- ಸರ್ವಆತ್ಮರಿಗೆ ಸ್ವ-ಸ್ವರೂಪ, ಸ್ವಧರ್ಮದ ಸ್ಥಿತಿಯಲ್ಲಿ ಸ್ಥಿತ ಮಾಡಿಸುವುದು ಅಂದಮೇಲೆ ಬ್ರಾಹ್ಮಣರಿಗೆ ಅಥವಾ ಬ್ರಹ್ಮಾಕುಮಾರ- ಕುಮಾರಿಯರಿಗೆ ಈ ತಮ್ಮ ಕರ್ತವ್ಯ ಮರೆತುಹೋಗುತ್ತದೆಯೇ? ಎರಡನೇ ಮಾತೇನೆಂದರೆ ಯಾವುದೇ ವಸ್ತು ಸದಾಕಾಲ ಜೊತೆ ಹಾಗೂ ಸನ್ಮುಖದಲ್ಲಿದ್ದರೆ ಅದೆಂದಾದರೂ ಮರೆತುಹೋಗುತ್ತದೆಯೇ? ಅತೀ ಸಮೀಪಕ್ಕಿಂತಲೂ ಸಮೀಪ ಮತ್ತು ಸದಾ ಜೊತೆಯಿರುವ ವಸ್ತು ಯಾವುದು? ಆತ್ಮಕ್ಕೆ ಸದಾ ಸಮೀಪ ಹಾಗೂ ಸದಾ ಜೊತೆಯಿರುವ ವಸ್ತು ಯಾವುದು? ಶರೀರ ಅಥವಾ ದೇಹ, ಇದು ಸದಾ ಜೊತೆಯಿರುವಕಾರಣ ನಿರಂತರ ನೆನಪಿರುತ್ತದೆಯಲ್ಲವೆ. ಮರೆಸಿದರೂ ಅದು ಮರೆತುಹೋಗುವುದಿಲ್ಲ. ಹಾಗೆಯೇ ಈಗ ತಾವು ಶ್ರೇಷ್ಠ ಆತ್ಮರಿಗೆ ಸದಾ ಸಮೀಪ ಮತ್ತು ಸದ ಜೊತೆಯಿರುವವರು ಯಾರು? ಬಾಪ್‌ದಾದಾರವರು ಸದಾ ಜೊತೆ ಹಾಗೂ ಸದಾ ಸನ್ಮುಖದಲ್ಲಿದ್ದಾರೆ. ಹೇಗೆ ಜೊತೆಯಲ್ಲಿರುವ ದೇಹವು ಎಂದೂ ಮರೆತುಹೋಗುವುದಿಲ್ಲ ಅಂದಮೇಲೆ ತಂದೆಯು ಇಷ್ಟು ಸಮೀಪವಿದ್ದರೂ ಏಕೆ ಮರೆತುಹೋಗುತ್ತಾರೆ? ವರ್ತಮಾನ ಸಮಯದಲ್ಲಿ ಯಾವ ದೂರು ಕೊಡುತ್ತೀರಿ? ತಂದೆಯ ನೆನಪು ಮರೆತುಹೋಗುತ್ತದೆ ಎಂದು ಹೇಳುತ್ತೀರಿ. ಬಹಳಜನ್ಮಗಳಿಂದ ಜೊತೆಯಿರುವ ವಸ್ತುವಾದ ದೇಹ ಮತ್ತು ದೇಹದ ಸಂಬಂಧವು ಮರೆತುಹೋಗುವುದಿಲ್ಲ. ಆದರೆ ಯಾರಿಂದ ಸರ್ವ ಖಜಾನೆಗಳ ಪ್ರಾಪ್ತಿಯಾಗುತ್ತದೆಯೋ ಮತ್ತು ಸದಾ ಬಳಿಯಿರುವುದೋ ಅದನ್ನೇಕೆ ಮರೆಯುವಿರಿ? ಏರಿಸುವವರು ನೆನಪು ಬರಬೇಕೋ ಅಥವಾ ಬೀಳಿಸುವವರೋ? ಒಂದುವೇಳೆ ತಳ್ಳುವವರು ತಪ್ಪಾಗಿ ನೆನಪಿಗೆ ಬಂದರೂ ಸಹ ಅವರನ್ನು ಮರೆಯುತ್ತೀರಲ್ಲವೆ ಅಂದಮೇಲೆ ಏರಿಸುವವರೇಕೆ ಮರೆತುಹೋಗುತ್ತದೆ? ಯಾವಾಗ ಬ್ರಾಹ್ಮಣರು ತಮ್ಮ ಸ್ವ-ಸ್ಥಿತಿಯಲ್ಲಿ ಸ್ವಸ್ಮೃತಿ ಹಾಗೂ ಶ್ರೇಷ್ಠಸ್ಮೃತಿಯಲ್ಲಿ ಸ್ಥಿತರಾಗುವರೋ ಆಗ ಅನ್ಯಆತ್ಮರನ್ನು ಸ್ಥಿತ ಮಾಡಬಲ್ಲಿರಿ.

ತಾವೆಲ್ಲರೂ ಈ ಸಮಯದಲ್ಲಿ ತಂದೆಯ ಜೊತೆಜೊತೆ ಇದೇ ಕರ್ತವ್ಯಕ್ಕಾಗಿ ನಿಮಿತ್ತರಾಗಿದ್ದೀರಿ. ಪ್ರತಿಯೊಂದು ಆತ್ಮನಿಗೆ ಬಹಳಸಮಯದಿಂದ ಯಾವ ಇಚ್ಛೆ ಹಾಗೂ ಆಸೆಯಿದೆ? ಅನೇಕ ಆತ್ಮರಿಗೆ ಬಹಳ ಸಮಯದಿಂದ ನಿರ್ವಾಣ ಅಥವಾ ಮುಕ್ತಿಧಾಮದಲ್ಲಿ ಹೋಗುವ ಇಚ್ಛೆಯಿದೆ ಅಂದಮೇಲೆ ಎಲ್ಲಾ ಆತ್ಮರ ಬಹಳಸಮಯದ ಆಸೆಯನ್ನು ಪೂರ್ಣಮಾಡಿಸುವ ಕರ್ತವ್ಯಕ್ಕೆ ತಾವು ಬ್ರಾಹ್ಮಣರು ನಿಮಿತ್ತರಾಗಿದ್ದೀರಿ. ಎಲ್ಲಿಯವರೆಗೆ ಈ ಸ್ಥಿತಿಯನ್ನು ಮಾಡಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಈ ಕರ್ತವ್ಯವನ್ನು ಹೇಗೆ ಪೂರೈಸುವಿರಿ? ಒಂದುವೇಳೆ ಮುಕ್ತಿ-ಜೀವನ್ಮುಕ್ತಿಯನ್ನು ಪ್ರಾಪ್ತಿ ಮಾಡಿಕೊಳ್ಳುವ ತಮ್ಮ ಆಸೆಯನ್ನೇ ಪೂರ್ಣ ಮಾಡಲಿಲ್ಲವೆಂದರೆ ಅನ್ಯರಿಗೆ ಹೇಗೆ ಮಾಡುವಿರಿ? ಮುಕ್ತಿ ಹಾಗೂ ಜೀವನ್ಮುಕ್ತಿಯ ವಾಸ್ತವಿಕ ಅನುಭವವೇನು? ಎಂಬುದನ್ನು ಮುಕ್ತಿ-ಜೀವನ್ಮುಕ್ತಿಯಲ್ಲಿ ಹೋದನಂತರ

ಅನುಭವ ಮಾಡುವಿರಾ? ಮುಕ್ತಿಯಲ್ಲಿದ್ದಾಗ ಅನುಭವದಿಂದ ದೂರವಿರುತ್ತೀರಿ ಮತ್ತು ಜೀವನ್ಮುಕ್ತಿಯಲ್ಲಿದ್ದಾಗ ಜೀವನ ಬಂಧನವೆಂದರೇನು ಎಂಬುದೇ ಅವಿದ್ಯಾ ಆಗಿರುವುದರಿಂದ ಜೀವನ್ಮುಕ್ತಿಯಲ್ಲಿದ್ದೇವೆ ಎಂಬುದನ್ನೂ ಅನುಭವ ಮಾಡುವುದಕ್ಕೆ ಆಗುವುದಿಲ್ಲ. ಆದರೆ ತಂದೆಯ ಮೂಲಕ ಯಾವ ಮುಕ್ತಿ-ಜೀವನ್ಮುಕ್ತಿಯ ಆಸ್ತಿಯು ಪ್ರಾಪ್ತಿಯಾಗುತ್ತದೆಯೋ ಅದರ ಅನುಭವವನ್ನು ಈಗಲೇ ಮಾಡಬಹುದಲ್ಲವೇ? ನಿರ್ವಾಣ ಸ್ಥಿತಿ ಹಾಗೂ ಮುಕ್ತಸ್ಥಿತಿಯ ಬಗ್ಗೆ ಈಗಲೇ ಅರಿತುಕೊಳ್ಳುವಿರಿ ಆದ್ದರಿಂದ ಮುಕ್ತಿ-ಜೀವನ್ಮುಕ್ತಿಯ ಅನುಭವವನ್ನು ಈಗ ಮಾಡಬೇಕಾಗಿದೆ. ಯಾವಾಗ ಸ್ವಯಂ ಮುಕ್ತಿ-ಜೀವನ್ಮುಕ್ತಿಯ ಅನುಭವಿಯಾಗುವಿರೋ ಆಗಲೇ ಅನ್ಯಆತ್ಮರಿಗೆ ಮುಕ್ತಿ ಅರ್ಥಾತ್ ತಮ್ಮ ಮನೆ ಹಾಗೂ ತಮ್ಮ ರಾಜ್ಯ ಸ್ವರ್ಗದ ಗೇಟಿನಲ್ಲಿ ಹೋಗುವ ಪಾಸ್‌ನ್ನು ಕೊಡಬಲ್ಲಿರಿ. ಎಲ್ಲಿಯವರೆಗೆ ತಾವು ಬ್ರಾಹ್ಮಣರು ಯಾವುದೇ ಆತ್ಮನಿಗೆ ಗೇಟ್-ಪಾಸ್ ಕೊಡುವುದಿಲ್ಲವೋ ಅಲ್ಲಿಯವರೆಗೆ ಅವರು ಪಾಸ್ ಆಗುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಮುಕ್ತಿ-ಜೀವನ್ಮುಕ್ತಿಧಾಮದ ಗೇಟ್-ಪಾಸ್ ತೆಗೆದುಕೊಳ್ಳುವವರ ಅತಿಉದ್ದವಾದ ಕ್ಯೂ ತಮ್ಮೆಲ್ಲರ ಬಳಿ ನಿಲ್ಲುವುದಿದೆ. ಒಂದುವೇಳೆ ಗೇಟ್ - ಪಾಸ್ ಕೊಡುವುದರಲ್ಲಿಯೇ ನಿಧಾನಿಸಿದರೆ ಸಮಯವು ಟೂ-ಲೇಟ್ ಆಗಿಬಿಡುವುದು. ಆದ್ದರಿಂದ ತಮ್ಮನ್ನೂ ಸಹ ಸ್ವಸ್ವರೂಪ, ಸ್ವಧರ್ಮ, ಸ್ವದೇಶಿ ಎಂದು ತಿಳಿದಾಗ, ಸದಾ ಈ ಸ್ಥಿತಿಯಲ್ಲಿ ಸ್ಥಿತರಾಗಿದ್ದಾಗಲೇ ಒಂದು ಸೆಕೆಂಡಿನಲ್ಲಿ ಯಾವುದೇ ಆತ್ಮನನ್ನು ಪರಿವರ್ತನೆ ಮಾಡಬಲ್ಲಿರಿ. ತಮ್ಮ ಕಲ್ಯಾಣದ ವೃತ್ತಿಯಿಂದ ಅವರಿಗೆ ಸ್ಮೃತಿ ತರಿಸುತ್ತಾ ಪ್ರತೀ ಆತ್ಮನಿಗೆ ಗೇಟ್ ಪಾಸ್ ಕೊಡಬಲ್ಲಿರಿ. ಪಾಪ! ಚಡಪಡಿಸುತ್ತಿರುವ ಆತ್ಮರು ತಾವು ಶ್ರೇಷ್ಠ ಆತ್ಮರಿಂದ ಕೇವಲ ಒಂದು ಸೆಕೆಂಡಿನಲ್ಲಿ ತಮ್ಮ ಜನ್ಮಜನ್ಮದ ಆಸೆಯನ್ನು ಪೂರ್ಣ ಮಾಡಿಕೊಳ್ಳುವ ದಾನ ಬೇಡಲು ಬರುವರು. ಆಗ ಮಾಸ್ಟರ್ ಸರ್ವಶಕ್ತಿವಂತರಾಗಿ ಒಂದುಸೆಕೆಂಡಿನ ವಿಧಿಯಿಂದ ಆ ಆತ್ಮರಿಗೆ ಸಿದ್ಧಿ ಪ್ರಾಪ್ತಿ ಮಾಡಿಸುವಷ್ಟು ಸರ್ವಶಕ್ತಿಗಳನ್ನು ಜಮಾ ಮಾಡಿಕೊಂಡಿದ್ದೀರಾ? ನಿಮ್ಮ ರಚನೆಯಾದ ವಿಜ್ಞಾನವೇ ದಿನ-ಪ್ರತಿದಿನ ಕಾಲ ಅರ್ಥಾತ್ ಸಮಯದ ಮೇಲೆ ವಿಜಯಿಯಾಗುತ್ತಾ ಹೋಗುತ್ತಿದೆ. ಪ್ರತೀ ಕಾರ್ಯದಲ್ಲಿ ಬಹಳ ಸ್ವಲ್ಪಸಮಯದ ವಿಧಿಯಿಂದ ಕಾರ್ಯದ ಸಿದ್ಧಿಯನ್ನು ಪ್ರಾಪ್ತಿ ಮಾಡಿಕೊಳ್ಳುತ್ತಾ ಹೋಗುತ್ತಿದ್ದಾರೆ. ಸ್ವಿಚ್‌ಆನ್ ಮಾಡಿದಕೂಡಲೇ ಕಾರ್ಯ ಸಿದ್ಧವಾಯಿತು. ಅವರದು ಈ ವಿಧಿ ಇದೆಯಲ್ಲವೆ. ಹಾಗೆಯೇ ಮಾಸ್ಟರ್ ರಚಯಿತರು ತಮ್ಮ ಶಾಂತಿಯ ಶಕ್ತಿಯಿಂದ ಹಾಗೂ ಸರ್ವಶಕ್ತಿಗಳಿಂದ ಒಂದು ಸೆಕೆಂಡಿನ ವಿಧಿಯಿಂದ ಯಾರಿಗಾದರೂ ಸಿದ್ಧಿಯನ್ನು ನೀಡಲು ಸಾಧ್ಯವಿಲ್ಲವೇ? ಈಗ ಈ ಶ್ರೇಷ್ಠಸೇವೆಯ ಅವಶ್ಯಕತೆಯಿದೆ. ಇಂತಹ ಸೇವಾಧಾರಿ ಅಥವಾ ಈಶ್ವರನ ಸೇವಾಧಾರಿಗಳಾಗಿ.

ನಯನಗಳ ಈಶ್ವರೀಯ ನಶೆಯು ಸೇವೆ ಮಾಡಲಿ ಏಕೆಂದರೆ ಆತ್ಮರು ಅನೇಕ ಜನ್ಮಗಳಿಂದ ಅನೇಕ ಪ್ರಕಾರದ ಸಾಧನೆಗಳನ್ನು ಮಾಡುತ್ತಾ ಮಾಡುತ್ತಾ ಸುಸ್ತಾಗಿದ್ದಾರೆ. ಈಗ ಸಿದ್ಧಿಯನ್ನು ಬಯಸುತ್ತಾರೆಯೇ ಹೊರತು ಸಾಧನೆಯನ್ನಲ್ಲ. ಅಂದಮೇಲೆ ಸಿದ್ಧಿ ಅರ್ಥಾತ್ ಸದ್ಗತಿ, ಇಂತಹ ಚಡಪಡಿಸುತ್ತಿರುವ, ಸುಸ್ತಾಗಿರುವ ಆತ್ಮರು ಹಾಗೂ ಬಾಯಾರಿದ ಆತ್ಮರ ಬಾಯಾರಿಕೆಯನ್ನು ತಾವು ಶ್ರೇಷ್ಠಆತ್ಮರ ವಿನಃ ಯಾರು ನೀಗಿಸುವರು ಹಾಗೂ ಸಿದ್ಧಿಯನ್ನು ಪ್ರಾಪ್ತಿ ಮಾಡಿಸುವರು? ತಮ್ಮ ವಿನಃ ಮತ್ಯಾವ ಆತ್ಮನಾದರೂ ಮಾಡಲು ಸಾಧ್ಯವೇ? ಅನೇಕಬಾರಿ ಮಾಡಿರುವ ತಮ್ಮ ಶ್ರೇಷ್ಠಕರ್ತವ್ಯವು ನೆನಪಿಗೆ ಬರುತ್ತಿದೆಯೇ? ಎಷ್ಟೆಷ್ಟು ಶೇಷ್ಠಸ್ಥಿತಿಯನ್ನು ಮಾಡಿಕೊಳ್ಳುತ್ತಾ ಹೋಗುತ್ತೀರೋ ಅಷ್ಟು ಆತ್ಮರ ಕೂಗಿನ ಆಲಾಪ, ತಾವು ಆತ್ಮರನ್ನು, ಶಕ್ತಿಯರನ್ನು ಆಹ್ವಾನ ಮಾಡುವ ಆಲಾಪ, ಚಡಪಡಿಸುತ್ತಿರುವ ಆತ್ಮಗಳ ಅನಾಥ ಮುಖಗಳು, ಸುಸ್ತಾಗಿರುವ ಆತ್ಮರ ಚಹರೆಗಳು ಕಂಡುಬರುವುದು. ಹೇಗೆ ಆದಿಸ್ಥಾಪನಾ ಕಾರ್ಯದಲ್ಲಿ ಸಾಕಾರತಂದೆಯ ಅನುಭವದ ಉದಾಹರಣೆಯನ್ನು ನೋಡಿದಿರಿ. ಆತ್ಮರ ಸೇವೆಯ ವಿನಃ ಬ್ರಹ್ಮತಂದೆಯು ನಿಂತರೇ? ಸೇವೆಯಿಲ್ಲದೆ ಬೇರೇನಾದರೂ ಕಾಣಿಸುತ್ತಿತ್ತೇ? ಹಾಗೆಯೇ ಆತ್ಮರಿಗೆ ಸಿದ್ಧಿಯನ್ನು ಪ್ರಾಪ್ತಿ ಮಾಡಿಸುವ ಲಗನ್ನಿನಲ್ಲಿ ಮಗ್ನರಾಗಿ ಆಗ ಈ ಚಿಕ್ಕ-ಚಿಕ್ಕ ಯಾವ ಮಾತುಗಳಲ್ಲಿ ತಮ್ಮ ಸಮಯ ಹಾಗೂ ಜಮಾ ಮಾಡಿಕೊಂಡಿರುವ ಶಕ್ತಿಗಳನ್ನು ಕಳೆಯುತ್ತೀರೋ ಅದು ಉಳಿತಾಯವಾಗುವುದು ಹಾಗೂ ಜಮಾ ಆಗುತ್ತಾ ಹೋಗುವುದು. ಯಾವಾಗ ಒಂದು ಸೆಕೆಂಡಿನಲ್ಲಿ ತಮ್ಮ ಪವರ್ ಫುಲ್ ವೃತ್ತಿಯಿಂದ ಬೇಹದ್ದಿನ ಆತ್ಮರ ಸರ್ವೀಸ್ ಮಾಡಬಲ್ಲಿರೊ ಆಗ ತಮ್ಮ ಹದ್ದಿನ ಚಿಕ್ಕ-ಚಿಕ್ಕ ಮಾತುಗಳಲ್ಲಿ ಸಮಯವನ್ನೇಕೆ ಕಳೆಯುತ್ತೀರಿ? ಬೇಹದ್ದಿನಲ್ಲಿರಿ ಆಗ ಹದ್ದಿನ ಮಾತುಗಳು ಸ್ವತಹ ಸಮಾಪ್ತಿಯಾಗುವುದು. ತಾವು ಹದ್ದಿನ ಮಾತುಗಳಲ್ಲಿ ಸಮಯವನ್ನು

ವ್ಯರ್ಥಮಾಡಿ ನಂತರ ಬೇಹದ್ದಿನಲ್ಲಿ ಸ್ಥಿತರಾಗಲು ಬಯಸುತ್ತೀರಿ. ಆದರೆ ಈಗ ಆ ಸಮಯ ಹೋಯಿತು. ಈಗಂತೂ ಬೇಹದ್ದಿನ ಸೇವೆಯಲ್ಲಿ ಸದಾ ತತ್ಪರರಾಗಿರಿ ಆಗ ಹದ್ದಿನ ಮಾತುಗಳು ತಾನಾಗಿಯೇ ಬಿಟ್ಟುಹೋಗುವುದು. ನೀವು ಅನ್ಯಆತ್ಮರಿಗೆ ಈಗ ಭಕ್ತಿಯಲ್ಲಿ ಸಮಯ ಕಳೆಯುವುದೆಂದರೆ ಗೊಂಬೆಗಳ ಆಟದಲ್ಲಿ ಸಮಯ ಕಳೆಯುವುದು ಎಂದು ಹೇಳುತ್ತೀರಿ, ಏಕೆಂದರೆ ಈಗ ಭಕ್ತಿಯ ಕಾಲವು ಸಮಾಪ್ತಿಯಾಗುತ್ತಿದೆ, ಈ ರೀತಿ ಹೇಳುತ್ತೀರಲ್ಲವೆ? ಅಂದಮೇಲೆ ತಾವು ಈ ಹದ್ದಿನ ಮಾತುಗಳೆಂಬ ಗೊಂಬೆಯಾಟದಲ್ಲಿ ಸಮಯವನ್ನೇಕೆ ಕಳೆಯುತ್ತೀರಿ? ಯಾವುದರಿಂದ ಯಾವುದೇ ಪ್ರಾಪ್ತಿಯಿಲ್ಲವೋ ಅಂತಹ ಹದ್ದಿನ ಮಾತುಗಳೂ ಸಹ ಗೊಂಬೆಯಾಟವೇ ಅಲ್ಲವೆ. ಇದರಿಂದ ವೇಸ್ಟ್ ಆಫ್ ಟೈಮ್, ವೇಸ್ಟ್ ಆಫ್ ಎನರ್ಜಿ, ಆದ್ದರಿಂದ ತಂದೆಯು ಹೇಳುತ್ತಾರೆ- ಈಗ ಈ ಗೊಂಬೆಯಾಟದ ಸಮಯವು ಸಮಾಪ್ತಿಯಾಗುತ್ತಿದೆ. ಹೇಗೆ ಈಗಿನ ಸಮಯದಲ್ಲಿ ಯಾವುದಾದರೂ ಹೊಸಫ್ಯಾಷನ್ ಬಂದರೆ ಹೊಸಫ್ಯಾಷನ್ನಿನ ಸಮಯದಲ್ಲಿ ಹಳೆಯ ಫ್ಯಾಷನ್ ಮಾಡುತ್ತಿದ್ದರೆ ಅವರಿಗೆ ಏನು ಹೇಳುವುದು? ಹಾಗೆಯೇ ಈ ಚಿಕ್ಕ-ಚಿಕ್ಕ ಮಾತುಗಳಲ್ಲಿಯೇ ಸಮಯ ಕಳೆಯುವುದೂ ಸಹ ಮೊದಲಿನ ಹಳೆಯ ಫ್ಯಾಷನ್ ಆಗಿದೆ. ಈಗ ಅದನ್ನು ಮಾಡಬಾರದು. ಹೇಗೆ ತಾವೂ ಸಹ ಕೆಲಕೆಲವರಿಗೆ ಈಗಿನ ಸಮಯದ ಪ್ರಮಾಣ ಸಂಬಾಲನೆ(ಹ್ಯಾಂಡ್ಲಿಂಗ್) ಮಾಡಿ, ಹಳೆಯ ಹ್ಯಾಂಡ್ಲಿಂಗ್ ಮಾಡಬೇಡಿ ಎಂದು ಹೇಳುತ್ತೀರಲ್ಲವೆ. ಇಂತಹವರದು ಹಳೆಯ ಪದ್ಧತಿ, ಅವರದು ಹೊಸ ಪದ್ಧತಿ ಎಂದು ಹೇಳುತ್ತೀರಲ್ಲವೆ ಅಂದಮೇಲೆ ತಮ್ಮನ್ನು ತಾವು ಸಂಬಾಳಿಸುವುದು ಕೂಡ ಮಾಡಿಕೊಳ್ಳುವುದೂ ಸಹ ಹಳೆಯ ಪದ್ಧತಿಯಲ್ಲಿರಬಾರದಲ್ಲವೆ. ಹೇಗೆ ಅನ್ಯರಿಗೆ ಹಳೆಯ ಪದ್ದತಿಯಲ್ಲಿ ಸಂಭಾಳಿಸುವುದು ನಿಮಗೆ ಇಷ್ಟವಾಗುವುದಿಲ್ಲ ಆದರೆ ತಮ್ಮನ್ನು ಇಲ್ಲಿಯವರೆಗೂ ಹಳೆಯ ಪದ್ಧತಿಯಿಂದ ಏಕೆ ನಡೆಸುತ್ತೀರಿ? ಈಗ ಪರಿವರ್ತನಾ ದಿವಸವನ್ನಾಚರಿಸಿ. ಪ್ಲಾನಿಂಗ್ ಬುದ್ಧಿಯವರ ಪಾರ್ಟಿ ಬಂದಿದೆಯಲ್ಲವೆ. ಆದ್ದರಿಂದ ಪ್ಲಾನಿಂಗ್ ಪಾರ್ಟಿಗೆ ಹೊಸಪ್ಲಾನ್ ಕೊಡುತ್ತಿದ್ದೇವೆ. ಹೇಗೆ ಆ ಸರ್ಕಾರವೂ ಸಹ ಒಂದೊಂದು ಸಲ ಒಂದೊಂದು ವಿಶೇಷ ದಿನವನ್ನು ಆಚರಿಸುತ್ತದೆಯಲ್ಲವೆ ಹಾಗೆಯೇ ತಾವಿಲ್ಲಿಗೆ ಬಂದಿದ್ದೀರೆಂದರೆ ತಮ್ಮನ್ನು ಹಳೆಯ ರೀತಿ-ಸಂಪ್ರದಾಯಗಳಲ್ಲಿ ನಡೆಯುವ ಪುರುಷಾರ್ಥದ ಪರಿವರ್ತನಾ ದಿವಸವನ್ನಾಗಿ ಆಚರಿಸಿ ಆದರೆ ಹದ್ದಿನದಲ್ಲ. ಬೇಹದ್ದಿನದಾಗಿದೆ. ಮಧುಬನ ಯಜ್ಞಭೂಮಿಯಲ್ಲಿ ಬಂದಿದ್ದೀರಿ, ಯಜ್ಞದಲ್ಲಿ ಅಗ್ನಿಯಿರುತ್ತದೆ. ಅಗ್ನಿಯಲ್ಲಿ ಯಾವುದೇ ವಸ್ತುವನ್ನು ಹಾಕಿದಾಗ ಬಹುಬೇಗನೆ ಬಾಗುತ್ತದೆ. ತಮ್ಮ ಸ್ವರೂಪವನ್ನು ಹೇಗೆ ಬೇಕೋ ಹಾಗೆಯೇ ತಯಾರು ಮಾಡಿಕೊಳ್ಳಬಲ್ಲಿರಿ. ಇಲ್ಲಿ ಯಜ್ಞದಲ್ಲಿ ಬಂದಿದ್ದೀರಿ, ಅಂದಮೇಲೆ ಸಹಜವಾಗಿ ಪರಿವರ್ತಿಸಿಕೊಳ್ಳಬಲ್ಲಿರಿ. ಒಳ್ಳೆಯದು- ಓಂಶಾಂತಿ.

ಅವ್ಯಕ್ತ ಮುರಳಿ 24-10-1971.

***ದೃಷ್ಟಿಯಿಂದ ಪರಿವರ್ತಿಸುವ ವಿಧಿ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಪ್ರೇಮ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸ್ವರೂಪ, ಸ್ವದೇಶ, ಸ್ವಧರ್ಮ, ಶ್ರೇಷ್ಠ ಕರ್ಮ, ಶ್ರೇಷ್ಠ ಸ್ಥಿತಿಯಲ್ಲಿ ಇದ್ದು ನಡೆಯುತ್ತಿದ್ದೇನೆ.

2. ನಾನು ಸ್ವಸ್ಥಿತಿಯ ಶಕ್ತಿಯಿಂದ ಸರ್ವ ಪರಿಸ್ಥಿತಿಗಳನ್ನು ದಾಟಿ 'ಪಾಸ್ ವಿತ್ ಆನರ್' ಆಗಿದ್ದೇನೆ.

3. ನಾನು ಸ್ವರೂಪ ಮತ್ತು ಸ್ವಧರ್ಮದಲ್ಲಿ ಸ್ಥಿತವಾಗಿ ಎಲ್ಲರನ್ನೂ ಸ್ವದೇಶಿಯಾಗಿ ತಯಾರು ಮಾಡಿದ್ದೇನೆ.

4. ಬ್ರಾಹ್ಮಣ ಆತ್ಮನಾದ ನನ್ನ ಜನ್ಮ ಮತ್ತು ಕರ್ತವ್ಯ ಸರ್ವಾತ್ಮರಿಗೆ ಸ್ವಸ್ವರೂಪ ಮತ್ತು ಸ್ವಧರ್ಮದ ಸ್ಥಿತಿಯಲ್ಲಿ ಸ್ಥಿತರನ್ನಾಗಿ ಮಾಡುವುದು.

5. ಶ್ರೇಷ್ಠ ಆತ್ಮನಾದ ನನಗೆ ಬಾಪ್ ದಾದಾ ಸದಾ ಜೊತೆ ಮತ್ತು ಸಮ್ಮುಖದಲ್ಲಿ ಇದ್ದಾರೆ.

6. ನಾನು ಅನೇಕ ಆತ್ಮರ "ಮುಕ್ತಿಧಾಮಕ್ಕೆ ಹೋಗಬೇಕು" ಎಂಬ ಇಚ್ಛೆಯನ್ನು ಪೂರ್ಣ ಮಾಡುವ ಕರ್ತವ್ಯಕ್ಕಾಗಿ ನಿಮಿತ್ತವಾಗಿದ್ದೇನೆ.

7. ನಾನು ಮುಕ್ತಿ ಮತ್ತು ಜೀವನ್ ಮುಕ್ತಿಯ ವಾರಸತ್ವದ ಪ್ರಾಪ್ತಿಯನ್ನು ಅನುಭವ ಮಾಡಿಕೊಂಡು ಎಲ್ಲರಿಗೂ ಅನುಭವ ಮಾಡಿಸಿದ್ದೇನೆ.

8. ಮಾಸ್ಟರ್ ಸರ್ವಶಕ್ತಿವಂತನಾದ ನಾನು ನನ್ನ ಶಾಂತಿಯ ಶಕ್ತಿಯಿಂದ ಸರ್ವಾತ್ಮರಿಗೆ ಒಂದು ಕ್ಷಣದ ವಿಧಿಯಿಂದ ಸಿದ್ಧಿಯನ್ನು ಪ್ರಾಪ್ತಿ ಮಾಡಿಸಿದ್ದೇನೆ.

9. ನಾನು ಬ್ರಹ್ಮಾ ತಂದೆಯನ್ನು ಅನುಸರಿಸುತ್ತಾ ಸದಾ ಬೇಹದ್ ಸೇವೆಯಲ್ಲಿ ಆತ್ಮರಿಗೆ ಸಿದ್ಧಿಯನ್ನು ಪ್ರಾಪ್ತಿ ಮಾಡಿಸುವ ಕಾರ್ಯದಲ್ಲಿ ನಿಮಗ್ನವಾಗಿ, ಹದ್ದಿನ ವಿಷಯಗಳನ್ನು ಸಮಾಪ್ತಿ ಮಾಡಿದ್ದೇನೆ.

10. ನಾನು ಮಧುಬನದ ಯಜ್ಞದಲ್ಲಿ ನನ್ನ ಸ್ವರೂಪವನ್ನು ನನಗೆ ಬೇಕಾದಹಾಗೆ ತಯಾರು ಮಾಡಿಕೊಂಡಿದ್ದೇನೆ.